# ಕರೆದರೂ ಕೇಳದೇ

ಇವತ್ತ್ಯಾಕೋ ದಿನವೇ ಚೆನ್ನಾಗಿಲ್ಲ. ಬೆಳ್ಳಂಬೆಳಿಗ್ಗೇನೇ ಎರಡು ಕ್ರೆಡಿಟ್ ಕಾರ್ಡ್ ಏಜನ್ಸಿಗಳಿಂದ ಫೋನ್ ಬಂದಿತ್ತು- "ಸಾರ್ ನಮ್ಮ ಹುಡುಗನ್ನ ಆಫೀಸ್ ಅಡ್ರೆಸ್‌ಗೆ ಕಳಿಸಿದ್ರೆ ಕ್ಯಾಶ್ ಪೇಮೆಂಟ್ ಮಾಡ್ತೀರಾ?"; ಅದಕ್ಕೂ ಮುಂಚೆ ಊರಿಗೆ ಫೋನ್ ಮಾಡಿದ್ದೆ, ಅಮ್ಮನಿಗೆ ಹುಶಾರಿರಲಿಲ್ಲ ಮತ್ತು ಯಥಾ ಪ್ರಕಾರ ಅವಳನ್ನು ಆಸ್ಪತ್ರೆಗೆ ಕರೆದೊಯ್ಯಲು ನನ್ನ ತಮ್ಮಂದಿರಿಬ್ಬರೂ ಇರಲಿಲ್ಲ; ಆಫೀಸ್‌ನಲ್ಲಿ ಇವತ್ತು ಡೆಡ್‌ಲೈನ್ ಇದೆ, ಅದರರ್ಥ ರಾತ್ರಿ ತನಕ ಆಫೀಸಿನಲ್ಲಿ ಕಂಪ್ಯೂಟರ್ ಮುಂದೆ ಕೊಳೆಯೋದೇ (ದೇವ್ರೇ, ಈ ಕಚಡಾ ಕೆಲಸವನ್ನ ಎಷ್ಟೊಂದು ದ್ವೇಷಿಸ್ತೀನಿ ನಾನು!); ಅದಲ್ಲದೇ ನಿನ್ನೆ ಕೂತ್ಕೊಂಡು ಲೆಕ್ಕ ಹಾಕಿನೋಡಿದೆ-ನನ್ನ ಸ್ನೇಹಿತನಿಗೆ ನಾನು ಮಾಡಿಕೊಡ್ತಾ ಇರೋ ಫ್ರೀಲ್ಯಾನ್ಸ್ ಕೆಲಸಕ್ಕೆ ಅವನು ಕೊಡ್ತಾ ಇರೋದು ಬರೀ ಭಿಕ್ಷೆ! ಇವೆಲ್ಲ ಆಗ್ತಾ ಇರೋದು ನನ್ನಿಂದ್ಲೇ, ನನ್ನ ತಪ್ಪುಗಳಿಂದ್ಲೇ. ಯಾಕೇಂದ್ರೆ ನನಗೆ ನನ್ನ ಬಗ್ಗೆ, ನನ್ನ ಕೆಲಸದ ಬಗ್ಗೆ, ನನ್ನ ಸಾಮರ್ಥ್ಯದ ಬಗ್ಗೆ ವಿಶ್ವಾಸವಿಲ್ಲ. ಎಲ್ಲಿ ಏನು ತಪ್ಪಾಗಿದೆಯೆಂದು ಗೊತ್ತಿದ್ದೂ ನಾನಿದನ್ನ ಸರಿಪಡಿಸಲಾರೆ. ನಾನ್ಯಾವತ್ತೂ 'ಹೌದಪ್ಪ' ಆಗಿದ್ದೇ ಇದಕ್ಕೆ ಕಾರಣ. ಗಟ್ಟಿಯಾಗಿ 'ಆಗೋಲ್ಲ', 'ಇಲ್ಲ' ಅಂತಾ ಹೇಳೋಕೇ ನನಗೆ ಬರೋಲ್ಲ; ಸಂಧರ್ಭಗಳನ್ನು, ವ್ಯಕ್ತಿಗಳನ್ನು ಎದುರಿಸೋಕೆ ಬರೋಲ್ಲ, ಅದಕ್ಕೋಸ್ಕರವೇ ಅವುಗಳನ್ನು ಎದುರಿಸೋಕೆ ಬದಲಾಗಿ ಅವುಗಳಿಂದ ತಪ್ಪಿಸಿಕೊಳ್ಳೋಕೆ, ಅಡಗೋಕೆ ಪ್ರಯತ್ನ ಮಾಡ್ತೀನಿ.

೧೧.೦೦ ಗಂಟೆಗೆ ನನ್ನ ಕ್ರೆಡಿಟ್ ಕಾರ್ಡ್ ಏಜನ್ಸಿಯಿಂದ ಮತ್ತೆ "ನಮ್ಮ ಪಾರ್ಟನ ನಿಮ್ಮ ಆಫೀಸ್ ಅಡ್ರೆಸ್‌ಗೇ ಕಳಿಸಲಾ ಸರ್?" ಅಂತಾ ಇನ್ನೊಂದು ಫೋನ್ ಬಂತು. ಅದಾದ ನಂತರ ನನ್ನ ಸ್ನೇಹಿತ 'ಅಲ್ಬರ್ಟ್'ಗೆ ಸ್ವಲ್ಪ ದುಡ್ಡು ಟ್ರಾನ್ಸ್‌ಫರ್ ಮಾಡೋಕಾಗುತ್ತ ಅಂತ ಕೇಳಿ ಫೋನ್ ಮಾಡಿದೆ. ತನ್ನ ಅಕೌಂಟಿನಲ್ಲಿ ಅಷ್ಟೊಂದು ದುಡ್ಡಿದೆಯೋ ಇಲ್ವೋ ಅಂತಾ ಸ್ವಲ್ಪ ಅನುಮಾನಿಸಿದ ಅವನು (ಅವನಿಂದ ಇದೇ ಉತ್ತರ ಬರುತ್ತೇಂತ ನನಗೆ ಗೊತ್ತಿತ್ತು). ಹಾಗಾಗಿ ನನಗೆ ಉಳಿದದ್ದು ಒಂದೇ ದಾರಿ... ನನ್ನ ಹಳೇ ಸಹೋದ್ಯೋಗಿ-ಸ್ನೇಹಿತನೊಬ್ಬನನ್ನು ಕೇಳೋದು. ಅವನು ಖಂಡಿತಾ ನನಗೆ ಸಾಲ ಕೊಡ್ತಾನೆ, ಆದ್ರೆ ನನಗೆ ಪಶ್ಚಾತ್ತಾಪವಾಗುವ ಹಾಗೆ ಮಾಡ್ತಾನೆ. ಅವನು ತನ್ನದೇ ಸಿದ್ಧಾಂತಗಳ ಮನುಷ್ಯ, ನನ್ನ ಹೋಲಿಕೆಯಲ್ಲಿ ಅವನು ಜೀವನದಲ್ಲಿ ತುಂಬಾ ಯಶಸ್ವಿ. ನನ್ನಂಥವರಿಗೆ ಸಹಾಯ ಮಾಡಿ ಅದನ್ನು ತೋರಿಸಿಕೊಳ್ಳೋದರಲ್ಲಿ ಅವನಿಗೆ ಒಂಥರಾ ಖುಷಿ.

******

ನಾನವನ ನಂಬರ್ ಡಯಲ್ ಮಾಡಿ ಮೊಬೈಲನ್ನು ಆಲಿಸಿದೆ, ಕಾಲ್ ರೌಟಿಂಗ್‌ಗೆ ಮೊದಲು 'ನನ್ನ ಮೊಬೈಲ್ ಬ್ಯಾಲೆನ್ಸ್ ಕಮ್ಮಿಯಿದೆಯೆಂತಲೂ ಆದಷ್ಟೂ ಬೇಗ ರೀಚಾರ್ಜ್ ಮಾಡಿಸಿಕೋಬೇಕಂತಲೂ' ಸ್ವಯಂಚಾಲಿತ ಪ್ರಕಟಣೆಯೊಂದು ಕೇಳಿಬಂತು. ಅತ್ತ ಕಡೆ ರಿಂಗಾಗತೊಡಗಿದ ತಕ್ಷಣ ನಾನು ಮಾಡಿದ ತಪ್ಪು ನನಗೆ ಗೊತ್ತಾಯಿತು; ನಾನು ನನ್ನ ಸ್ನೇಹಿತನ ನಂಬರ್‌ಗೆ ಬದಲಾಗಿ ನನ್ನದೇ ನಂಬರ್ ಡಯಲ್ ಮಾಡಿದ್ದೇನೆ. ಛೇ ಅಂದುಕೊಂಡು ಕಟ್ ಮಾಡೋಣ ಅನ್ನುವಷ್ಟರಲ್ಲಿ ನನ್ನ ಅತ್ತಕಡೆಯಿಂದ ಯಾರೋ ರಿಸೀವ್ ಮಾಡಿಯೇ ಬಿಟ್ಟರು (ಗ್ರೇಟ್! ನನಗೆ ನನ್ನ ನಂಬರನ್ನೂ ಸರಿಯಾಗಿ ಡಯಲ್ ಮಾಡೋಕೆ ಬಂದಿಲ್ಲ.)

"ಹಲೋ?",

"ಹಲೋ, ಯಾರಿದು?" ನಾನು ನನ್ನ ಸ್ನೇಹಿತನ ನಂಬರ್ ಡಯಲ್ ಮಾಡಲು ಹೋಗಿ ಅವನ ನಂಬರ್ ಡಯಲ್ ಮಾಡಿದುದಾಗಿ ಹೇಳಿ ಕ್ಷಮೆ ಕೇಳಿದೆ, ಅವನು ಸ್ವಲ್ಪ ತಡೆದು ನಂತರ ಕೇಳಿದ,

"ನಿಮ್ಮ ಸ್ನೇಹಿತನ ನಂಬರ್ ಏನು?" ನಾನು ಹೇಳಿದೆ. ಅವನು ಅಚ್ಚರಿಗೊಳಗಾದವನಂತೆ ಕೇಳಿದ,

"ಆದ್ರೆ, ಇದು ಕಂಪ್ಲೀಟಾಗಿ ಬೇರೆ ಕನೆಕ್ಷನ್, ಬೇರೆ ಸೀರೀಸ್ ಇರೋ ನಂಬರ್. ಇದರ ಬದಲು ತಪ್ಪು ತಪ್ಪಾಗಿ ನನ್ನ ನಂಬರ್ ಡಯಲ್ ಮಾಡೋದು ಅಂದ್ರೇ..?"

ನನಗೆ ಸುಸ್ತಾಗಿತ್ತು, ಆದರೂ ತಾಳ್ಮೆಯಿಂದ ನನ್ನ ಸ್ನೇಹಿತನ ನಂಬರ್ ಡಯಲ್ ಮಾಡೋದು ಬಿಟ್ಟು ನಾನು ನನ್ನ ನಂಬರನ್ನೇ ತಪ್ಪು ತಪ್ಪಾಗಿ ಡಯಲ್ ಮಾಡಿದ್ದನ್ನ ವಿವರಿಸಿದೆ (ಒಂದೆರೆಡು ಅಂಕಿಗಳು ಅತ್ತಿತ್ತ ಆಗಿರಬಹುದು, ಅದಕ್ಕೇ ಅವನಿಗೆ ಕರೆ ಹೋಗಿರಬಹುದು). ಅವನು ಮತ್ತೆ ಕೇಳಿದ,

"ನಿಮ್ಮ ನಂಬರ್ ಏನು?" ನಾನು ಹೇಳಿದೆ, ಅವನು ಕಿರಿಕಿರಿ ಮಾಡಿಕೊಂಡವನಂತೆ ಮತ್ತೆ ಕೇಳಿದ,

"ಇಲ್ಲಾರೀ, ನಾನು ನನ್ನ ನಂಬರ್ ಕೇಳಲಿಲ್ಲ, ನಿಮ್ಮ ನಂಬರ್ ಹೇಳಿ?" (ಅವನ ಮೊಬೈಲ್ ಸ್ಕ್ರೀನ್ ಮೇಲೆ ನನ್ನ ನಂಬರ್ ಕಾಣೋದಿಲ್ವೇ ಅವನಿಗೆ?) ನಾನು ನನ್ನ ನಂಬರನ್ನು ಪುನರುಚ್ಚರಿಸಲಾರಂಭಿಸಿದೆ, ಅವನು ಮಧ್ಯದಲ್ಲೇ ನನ್ನನ್ನು ತಡೆದ,

"ಇಲ್ಲ ಸರ್, ಅದು ನನ್ನ ನಂಬರ್!"

“ಏನು? ಸಾಧ್ಯವಿಲ್ಲಾರೀ...”

“ನಿಮ್ಮ ಮೊಬೈಲ್ ಸ್ಕ್ರೀನ್ ನೋಡ್ಕೊಳ್ಳಿ ಫ್ರೆಂಡ್...” ನಾನು ತಿಳೀ ಹಳದೀ ಬಣ್ಣದ ನನ್ನ ಮೊಬೈಲ್ ಪರದೆಯ ಮೇಲೆ ನನ್ನದೇ ನಂಬರ್ 'ಆಕ್ಟಿವ್ ಕಾಲ್'ನಲ್ಲಿರುವುದನ್ನು ಕಂಡೆ.

“ಇಲ್ಲ ಫ್ರೆಂಡ್,” ಅವನದೇ ಭಾಷೆ ಉಪಯೋಗಿಸಿದೆ, “ನೆಟ್‌ವರ್ಕ್‌ದೇನೋ ಗೂಫ್-ಅಪ್ ಇರಬೇಕು. ಆದ್ರೆ ಇದು ಮಾತ್ರ ನನ್ನ ನಂಬರ್ರೇ” ಅವನು ಕಿಸಕ್ಕನೆ ನಕ್ಕ. ಯಾಕೋ ವಿಚಿತ್ರ ಅನಿಸಿತು, ನಾನು ನನ್ನದೇ ಪ್ರತಿಧ್ವನಿಯನ್ನೇನ್ನಾದರೂ ಕೇಳುತಿದ್ದೇನಾ?

“ಅದ್ಹೇಗೆ ಬಾಸ್? ಎರಡು ವರ್ಷದಿಂದ ಈ ನಂಬರ್ನೇ ಉಪಯೋಗಿಸ್ತಾ ಇದೀನಿ ನಾನು?”

“ನಾನೂ ಕೂಡಾ ಫ್ರೆಂಡ್, ಇದು ನನ್ನ ಮೊದಲನೇ ಮೊಬೈಲ್ ಕನೆಕ್ಷನ್...” ಥಟ್ಟನೆ ಇದನ್ನು ಇಲ್ಲಿಗೇ ನಿಲ್ಲಿಸಿಬಿಡೋಣವೆಂದುಕೊಂಡು ಕಟ್ ಮಾಡಿದೆ, ಸುಮ್ಮನೆ ನನ್ನ ಜೀವನವನ್ನು ಇನ್ನಷ್ಟು ಸಮಸ್ಯೆಗಳಿಗೆ ಒಡ್ಡಿಕೊಳ್ಳೋದು? ಕರೆಯನ್ನು ಕಟ್ ಮಾಡಿ ನನ್ನ ಸೀಟಿನೊಳಕ್ಕೆ ಕುಸಿದು ಕುಳಿತೆ.

******

ಸ್ವಲ್ಪ ಹೊತ್ತು ಮೌನವಾಗಿ ಕಂಪ್ಯೂಟರ್ ಪರದೆಯನ್ನೇ ದಿಟ್ಟಿಸುತ್ತ ಕುಳಿತೆ. ನಂತರ ಯಾಕೇಂತ ಗೊತ್ತಿಲ್ಲ, ಸುಮ್ಮನೆ ಮೊಬೈಲ್ ತೆಗೆದುಕೊಂಡು ನನ್ನದೇ ನಂಬರ್ ರಿಂಗ್ ಮಾಡಿದೆ. ಆ ಕಡೆ 'ಕ್ಲಿಕ್' ಶಬ್ದದೊಂದಿಗೆ ನನ್ನ ಕರೆ ರಿಸೀವ್ ಆಗಿದ್ದು ಆಲಿಸಿ ನನ್ನ ಹೃದಯದ ಬಡಿತ ತಾರಕಕ್ಕೇರಿತು.

“ಹಲೋ...?” ತಟ್ಟನೆ ನನಗೀಗ ಅವನಿಗೂ ನನಗೂ ಇರುವ ಇನ್ನೊಂದು ಭಯಾನಕ ಸಾಮ್ಯವೊಂದು ಗೊತ್ತಾಯಿತು. ಅವನ ಧ್ವನಿ ನನ್ನಂತೆಯೇ ಇತ್ತು! ನನ್ನಗೊತ್ತು ಇದೆಲ್ಲ ಹುಚ್ಚು ಅನಿಸುತ್ತೆ, ಆದ್ರೆ ನಿಜ. ಆ ಕಡೆಯಿಂದ ಮತ್ತೆ ಅವನು ನುಡಿದ,

“ಹಲೋ...?”

“ಆಹ್, ಹಾಯ್, ಇದು ನಾನೇ”, ನನಗ್ಯಾಕೋ ಚಿಂತೆಗಿಂತ ಹೆಚ್ಚಾಗಿ ಮುಜುಗರವಾಗತೊಡಗಿತು.

“ಹೇಳು...” ಅವನು ಏಕವಚನಕ್ಕಿಳಿದಿದ್ದ.

“ನಿನ್ನ ಹೆಸರು...?”

“ಸರಿ, ಹೇಳ್ತೀನಿ. ಆದ್ರೆ ನಿನ್ನ ಹೆಸರು ಮೊದಲು ಹೇಳು”, ನನ್ನ ಹೆಸರು ಹೇಳಿದೆ,

ಅವನು ಸ್ವಲ್ಪ ಮೌನದ ನಂತರ ನುಡಿದ, “ನನ್ಹೆಸರು ಕೂಡಾ ಅದೇ!”

ಇದು ಹುಚ್ಚುತನದ ಪರಮಾವಧಿ. ಫೋನ್ ಇಟ್ಟುಬಿಡಲೇ ಅನಿಸಿದರೂ ಸುಮ್ಮನೆ ಮುಂದುವರಿದೆ,

“ಕೆಲಸ ಮಾಡ್ತಿದೀಯಾ?” “ಹೌದು.. ನೀನು?”

“ನಾನೂ ಕೂಡಾ. ನಾನೊಬ್ಬ ಸಾಫ್ಟ್‌ವೇರ್ ಎಂಜಿನೀಯರ್”

“ಹೇ ನಾನೂ ಕೂಡಾ. But don't tell me, you work for ...”

ಓಹ್! ಈ ಸಂಭಾಷಣೆಯೇ ಬೇಡವೆಂದೆನಿಸಿ ನಡುಗುವ ಬೆರಳುಗಳಿಂದ ಕರೆಯನ್ನು ತುಂಡರಿಸಿ ಸುಮ್ಮನೇ ಕುಳಿತೆ. (ನನ್ನ mobile service provider ಗೆ ಕಾಲ್ ಮಾಡಿ ಈ ಸಮಸ್ಯೆಯನ್ನು ವಿವರಿಸಲೇ? ಆದರೆ ಅವರಿಗೆ ಅರ್ಥವಾಗುವಂತೆ, ವಿಚಿತ್ರವೆನಿಸದಂತೆ ಈ ಸಮಸ್ಯೇನ ಹೇಗೆ ವಿವರಿಸಲಿ? ಇದೇನಾದರೂ ನಿಜವಾದ ಮೊಬೈಲ್ ಸಮಸ್ಯೇನೇ ಅಥವಾ ನನ್ನ ಮನಸಿನ ಹುಚ್ಚಾಟವೇ? ಇದೇನಾದರೂ ನನ್ನ ಮನಸಿನ ಹುಚ್ಚಾಟವೇ ಆಗಿದ್ದರೆ ನನ್ನ ಗತಿ? ಇನ್ನೇನು ನನ್ನ ಬಟ್ಟೆಯನ್ನೆಲ್ಲ ಹರಿದುಕೊಂಡು ಆಫೀಸಿನಲ್ಲೆಲ್ಲ ಚೀರಾಡುತ್ತ ಓಡಾಡತೊಡಗುತ್ತೇನೇನೋ? ಇಲ್ಲ, ಹಾಂ, ಈ ಮೊಬೈಲ್‌ನ user guide ತೆಗೆದು ನೋಡಬೇಕು. ನನ್ನ ರೂಂಮೇಟ್, ನನ್ನ ಸ್ನೇಹಿತ ಇಂತಹ ತರಲೆಗಳಲೆಲ್ಲ ಎತ್ತಿದ ಕೈ. ಹೊಸದು ಏನೇ ಎಲೆಕ್ಟ್ರಾನಿಕ್ ವಸ್ತು ತರಲಿ, ಎರಡೇ ದಿನದಲ್ಲಿ ಅದರ ಹೊರ-ಒಳಗನ್ನೆಲ್ಲ ಅರಿತು ಅದನ್ನು ಕೆಡಿಸುವುದರಲ್ಲಿ ಸಿದ್ಧಹಸ್ತ. ಇಂದೇನಾದರೂ ಏಪ್ರಿಲ್ ಒಂದಾ? ಛೇ ನಾನೆಂಥಾ ಮಡ್ಡಿ, ಆಚೆವಾರ ತಾನೇ ದೀಪಾವಳಿಗೆ ಮನೆಗೆ ಹೋಗಿದ್ದೆನಲ್ಲ!)

ಅಂದಿನ ಕೆಲಸದ ಮೇಲೆ ಆಸಕ್ತಿ ಹೊರಟು ಹೋಯಿತು. ರಾತ್ರಿ ರೂಮಿಗೆ ಹೋದವನೇ ಮೊಬೈಲಿನ user guide ತೆಗೆದು ಕೂಲಂಕುಶವಾದ ತಪಾಸಣೆ ಮಾಡಿದೆ, ಆದರೆ ಉಪಯೋಗವಾಗಲಿಲ್ಲ. ನಿಮ್ಮದೇ ನಂಬರ್ ಡಯಲಿಂಗ್ ಅನ್ನು ಬೇರ್ಯಾವುದೋ ನಂಬರ್‌ಗೆ ರೌಟಿಂಗ್ ಮಾಡಲು ಯಾವುದೇ ತಂತ್ರ ಇರಲಿಲ್ಲ. ಇದ್ದರೂ, ನನ್ನ ರೂಂಮೇಟ್ ನನ್ನ ಧ್ವನಿಯಲ್ಲೇ ಮಾತನಾಡಲು ಹೇಗೆ ಸಾಧ್ಯ? ಹೌದು, ಅದು ನನ್ನ ಧ್ವನಿಯೇನೋ ಹೌದು, ಆದರೆ ಅದರಲ್ಲಿ ನನ್ನಲ್ಲಿಲ್ಲದ ಖುಷಿ-ಸಂತೋಷ-ಸಂತೃಪ್ತಿಯೆಲ್ಲವೂ ಇದ್ದವು; ನಾನು ಈಗ ಮುಟ್ಟಿರುವ ಗುರಿ, ನಾನು ಮಾಡುತ್ತಿರುವ ಕೆಲಸ ಎಲ್ಲವೂ ನನಗೆ

ಖುಷಿಕೊಟ್ಟಿದ್ದಿದ್ದರೆ ನನ್ನ ಧ್ವನಿ ಹೇಗಿರುತ್ತಿತ್ತೋ ಹಾಗೆ. ಇವೆಲ್ಲ ಚಿಂತೆಗಳಿಂದ ನನ್ನ ತಲೆ ಕೆಟ್ಟು ಹುಚ್ಚುಹಿಡಿಯುವುದಕ್ಕೆ ಕ್ಷಣಗಣನೆ ಆರಂಭವಾಗಿದೆಯೇನೋ ಅನಿಸಲಾರಂಭಿಸಿತು.

******

ಆಗಲೇ ಹತ್ತುಗಂಟೆಯಾಗುತ್ತಿತ್ತು. ನನ್ನ ರೂಂಮೇಟ್ ಇನ್ನೂ ಬಂದಿರಲಿಲ್ಲ. ನಾನು ಮತ್ತೆ ನನ್ನ ನಂಬರನ್ನೇ ಡಯಲ್ ಮಾಡಿದೆ. ಈ ಬಾರಿ, ಎರಡು ರಿಂಗಾಗುವ ಮೊದಲೇ ಅವನು ಫೋನ್ ಎತ್ತಿಬಿಟ್ಟ (ನನ್ನನ್ನು ಹುಚ್ಚನನ್ನಾಗಿ ಮಾಡುವುದರಲ್ಲಿ ಅವನಿಗೆ ತುಂಬಾ ಮಜಾ ಸಿಗುತ್ತಿದೆಯೇನೋ?)

"ಓಹ್, ಹಾಯ್ ನನ್ನ **doppelganger**!"

"ನಾನಲ್ಲ, ನೀನು! ಹೌದು, ನೀನು ನನ್ನ '**doppelgange**'. ಮೊದಲೇ ಸಮಸ್ಯೆಗಳ ಹುತ್ತವಾಗಿರೋ ನನ್ನ ಜೀವನಕ್ಕೆ ನಿನ್ನದೊಂದು ಹೊಸಾ ಸಮಸ್ಯೆ ಸೇರಿಸ್ತಾ ಇದೀಯ." ನನ್ನ ಸಹನೆ ಕಳೆದುಕೊಂಡಿದ್ದಕ್ಕೆ ನನಗೆ ಬೇಜಾರಾಗಲಿಲ್ಲ, ಆದರೆ ಅವನಿಗೂ ಬೇಜಾರಾದಂತೆ ಕಾಣಿಸಲಿಲ್ಲ.

"ಓಹ್, ಕಮಾನ್ ನೌ. ಸಣ್ಣದೊಂದು ತಮಾಷೆ ಕೂಡಾ ಸಹಿಸಿಕೊಳ್ಳೋಕಾಗೋಲ್ವೇ? ಒಳ್ಳೇದಾಯ್ತು ನೀನು ಕಾಲ್ ಮಾಡಿದ್ದು. ಈಗ ತಾನೇ ನನ್ನ ಸ್ನೇಹಿತನೊಬ್ಬನಿಂದ ಒಂದು ಫ್ರೀಲ್ಯಾನ್ಸ್ ಕೆಲಸದ ಡೀಲ್ ಸಿಕ್ಕಿತು..." ನನಗಿದನ್ನೆಲ್ಲ ಯಾಕೆ ಹೇಳುತ್ತಿದ್ದಾನೋ ಅನಿಸಿತು, ಅವನು ಮುಂದುವರೆಸಿದ,

"ನಿಂಗೊತ್ತಾ? ನನಗೆ 'ಆಗೋಲ್ಲ' ಅನ್ನೋಕೆ ಧೈರ್ಯವೇ ಇರಲಿಲ್ಲ. ಅವನು ಕೊಡೋ ಚಿಕ್ಕಾಸಿಗೆ ಕೆಲಸ ಮಾಡೋದಾ ಅಂತ ಯೋಚನೆಯಾಗಿತ್ತು. ಆದ್ರೆ ಇಷ್ಟು ವರ್ಷಗಳ ನಂತರ ನನಗೂ ಬುದ್ಧಿ ಬಂದಿದೆ, ಸ್ವಲ್ಪ ವಿವೇಚನೆ ಮೂಡಿದೆ. ಈ ಪ್ರಾಜೆಕ್ಟ್‌ನಿಂದ ಅವನಿಗೆ ತುಂಬಾನೇ ದುಡ್ಡು ಸಿಗ್ತಾ ಇದೆ. ಅವನು 'ಆಡಿನಂತಹ ಸ್ನೇಹಿತ ಎಷ್ಟಕ್ಕಾದರೂ ಮಾಡಿಕೊಡ್ತಾನೆ' ಅಂದುಕೊಂಡಿದ್ದ ಅನಿಸುತ್ತೆ. ಪ್ರಾಜೆಕ್ಟನ್ನು ಪೂರ್ಣವಾಗಿ ಸ್ಟಡಿ ಮಾಡಿ ಇವತ್ತು ನಾನು ನನ್ನೆಲ್ಲ ವಿಚಾರಗಳನ್ನೆಲ್ಲ ಅವನ ಮುಂದಿಟ್ಟು ನನ್ನ ರೇಟ್ ಹೇಳಿದೆ, ಘಟ್ಟಂತ ಒಪ್ಪಿಕೊಂಡು ಬಿಟ್ಟ!"

ಇದ್ದಕ್ಕಿದ್ದಂತೆಯೇ ನಾನು ಕರೆಯನ್ನು ಕಟ್ ಮಾಡಿ ನನ್ನ ಅಲ್ಬರ್ಟ್‌ಗೆ ಫೋನಾಯಿಸಿದೆ, ಅವನೂ ಎರಡು ರಿಂಗಾಗುವುದರೊಳಗಾಗಿ ಕರೆಯನ್ನು ರಿಸೀವ್ ಮಾಡಿದ,

"ಹೇಳೋ..." ನಾನು ಅವನ ಪ್ರಾಜೆಕ್ಟ್ ಬಗ್ಗೆ ಮಾಡಿದ್ದ ಸ್ಟಡಿಯನ್ನೆಲ್ಲ ಹೇಳಿ ನನ್ನ ಕೆಲಸದ ನ್ಯಾಯಯುತವಾದ ಬೆಲೆ ಹೇಳಿದೆ, "ಓಕೇ, ಡನ್! ನಿಜ ಹೇಳಬೇಕೂಂದ್ರೆ ನಾನು ಅವಾಗಿನಿಂದ ನಿನ್ನನ್ನೇ ಕಾಂಟ್ಯಾಕ್ಟ್ ಮಾಡೋಕೆ ಪ್ರಯತ್ನಿಸ್ತಿದ್ದೆ. ನೀನು ಮೊಬೈಲ್ ಎತ್ತುತ್ತಲೇ ಇಲ್ಲ... ಕೆಲಸ ಮಾಡೋಕೆ ಆಗೋಲ್ಲ ಅಂತೀಯೇನೋ ಅಂತಾ ಹೆದರಿದ್ದೆ! ಗುಡ್... ದಟ್ಸ್ ಎ ಗುಡ್ ಡೀಲ್!"

ಫೋನ್ ಕಟ್ ಮಾಡಿ ನಾನು ಸಮಾಧಾನದ ನಿಟ್ಟುಸಿರುಬಿಟ್ಟೆ. ಈಗ ನನ್ನ ಸಂಕಷ್ಟಗಳಿಂದ ಸ್ವಲ್ಪವಾದರೂ ಹಗುರಾಗಬಹುದು ನಾನು, ಉಸಿರಾಡಬಹುದು. ನನ್ನ ಬೇರೆ ಸಮಸ್ಯೆಗಳನ್ನೂ ಇದೇ ತರಹ ಸಕಲ ಸಿದ್ಧತೆಗಳೊಂದಿಗೆ ಎದುರಿಸೋಣ. ಇನ್ನೇನು ನನ್ನ ರೂಂಮೇಟ್ ಬಂದೇ ಬಿಡ್ತಾನೆ, ಮೊದಲು ಅಡುಗೆ ಮಾಡೋಣ!

******

ನಾನು ಅವನನ್ನು ಕೇಳಿದೆ, "ಯಾವತ್ತಾದ್ರೂ ನನಗೆ ಕರೆ ಮಾಡೋಕೆ ಅಂತಾ ನಿನ್ನ ಮೊಬೈಲಿನಿಂದ ನಿನ್ನ ನಂಬರನ್ನೇ ಡಯಲ್ ಮಾಡಿದೀಯಾ?"

ಹೆಚ್ಚು ಯೋಚಿಸದೇ ಅವನು ನುಡಿದ, "ಮ್... ಹೌದು, ಮಾಡಿದೀನಿ... ಆದ್ರೆ ಪ್ರತೀಸಲವೂ ನನಗೆ ಬ್ಯುಸಿ ಮೆಸೇಜ್ ಸಿಕ್ಕಿದೆ, ಯಾವಾಗಲೂ ನನ್ನ ಕರೆ ನಿನ್ನನ್ನು ತಲುಪಿಯೇ ಇಲ್ಲ, ವಿಚಿತ್ರ ಅಲ್ವೇ?!"

"ಹೌದು..., ಈ ವೀಕೆಂಡ್‌ಗೇನು ಪ್ಲಾನು?"

"ಓಹ್, ನಾನು ಓದ್ಕೋಬೇಕು, ಎಕ್ಸಾಮ್ಸ್ ಹತ್ರ ಬರ್ತಿವೆ"

"ಸೋ?"

"ಸೋ, ನಂದೊಬ್ಬ ಫ್ರೆಂಡ್‌ಗೆ ಹೇಳಿದೀನಿ, ಅವೆರಡು ಸಬ್ಜೆಕ್ಟ್‌ಗಳ ಟ್ಯೂಶನ್ ತಗೋ ಅಂತ," ಅವನು ನಕ್ಕು ಮುಂದುವರಿದ, "ಈ ಫ್ರೆಂಡು ಹೋದವರ್ಷ ನನ್ನ ಸಹಪಾಠಿಯಾಗಿದ್ದ, ಈ ವರ್ಷ ನನ್ನ ಸೀನಿಯರ್‌ರ್ರಾಗಿದ್ದಾನೆ!"

"ಮ್... ನೀನು ಶೇಕ್ ಬಗ್ಗೆ ಮಾತಾಡ್ತಿದೀಯ ತಾನೇ?"

“ಹೌದು, ಸಕತ್ ಬ್ರೈಟ್ ಹುಡುಗ, ನಿಂಗೊತ್ತು ತಾನೇ?” ಈ ವಾರಾಂತ್ಯದಲ್ಲಿ ಏನು ಮಾಡಬೇಕೆಂದು ನನಗೆ ತಟ್ಟನೆ ಹೊಳೆಯಿತು. ಇವನೊಡನೆ ಮಾತು ಮುಗಿಸಿದ ಮೇಲೆ ಊರಿಗೆ ಫೋನ್ ಮಾಡಿ ಅಮ್ಮನಿಗೆ ಎಕ್ಸಾಮ್‌ಗಳಿಗೆ ಓದಿಕೊಳ್ಳಬೇಕಾಗಿರುವುದರಿಂದ ಈ ವಾರ ಬರಲಾಗುವುದಿಲ್ಲವೆಂದು ಹೇಳಿದೆ, ಅಮ್ಮ ಸರಿಯೆಂದಳು ಮತ್ತು ಚೆನ್ನಾಗಿ ಓದುವಂತೆ ತಾಕೀತು ಮಾಡಿದಳು. ನಾನು ನನ್ನ ಕಬೋರ್ಡಿನ ಪುಸ್ತಕಗಳನೆಲ್ಲ ಹುಡುಕಿ ತೆಗೆದು ಹಳೆಯ ಪ್ರಶ್ನೆ ಪತ್ರಿಕೆಗಳು, ನೋಟ್ಸುಗಳು, ಜೆರಾಕ್ಸ್‌ಗಳನ್ನೆಲ್ಲ ಕೂಡಿಡಲಾರಂಭಿಸಿದೆ...

******

“ನನ್ನನ್ಯಾವತ್ತೂ ಭೇಟಿಯಾಗ್ಬೇಕು ಅಂತ ಅನಿಸಿಲ್ವೇ ನಿನಗೆ?” ನಾವಿಬ್ಬರೂ ಈ ವಿಚಿತ್ರ ಸಂಬಂಧದಲ್ಲಿ ಬೆಸಗೊಂಡು ಒಂದು ತಿಂಗಳಾಗಿತ್ತು, ಮೊನ್ನೆ ತಾನೇ ನನ್ನ ಸೆಮಿಸ್ಟರ್ ಪರೀಕ್ಷೆಗಳೂ ಮುಗಿದ್ದಿದ್ದವು.

“ನಿನ್ನನ್ನು ಭೇಟಿಯಾಗೋದೇ? ಹೌದು, ಯೋಚಿಸಿದ್ದೀನಿ...” ನಾನು ಆಫೀಸಿನ ಕೆಫಿಟೇರಿಯದಲ್ಲಿ, ಅವನೊಂದಿಗೆ ಮೊಬೈಲಿನಲ್ಲಿ ಮಾತನಾಡುತ್ತ ಕುಳಿತಿದ್ದೆ. ನನ್ನೊಡನೆ ಕುಳಿತಿದ್ದ ನನ್ನ ಸಹೋದ್ಯೋಗಿಗಳು ಚಿತ್ರ-ವಿಚಿತ್ರ ಮುಖಗಳನ್ನು ಮಾಡಿಕೊಂಡು ನಗುತ್ತಿದ್ದರು. ಅವರಿಗೆಲ್ಲರಿಗೂ ನನಗೊಬ್ಬಳು ಸ್ನೇಹಿತೆ, ಗರ್ಲ್‌ಫ್ರೆಂಡ್ ಸಿಕ್ಕಿದ್ದಾಳೆ ಎಂಬ ಗುಮಾನಿ! ನನ್ನ ರೂಂಮೇಟ್ ಕೂಡ ನಾನು ಅವನಿಂದೇನೋ ಮುಚ್ಚಿಡುತ್ತಿದ್ದೇನೆ ಅಂದುಕೊಂಡಿದ್ದಾನೆ... ಅಲ್ಲದೇ ಇತ್ತೀಚೆಗೆ ವಿನಾಕಾರಣ ತುಂಬಾ ಖುಷಿ-ಖುಷಿಯಾಗಿ, ಕಳೆ-ಕಳೆಯಾಗಿರಲಾರಂಭಿಸಿದ್ದೇನೆ ಅಂತಾ ಕೂಡ ಹೇಳುತ್ತಿರುತ್ತಾನೆ.

“ಸೋ, ಯಾವಾಗ ಭೇಟಿ?”

“ಇವತ್ತು?” ನನ್ನ ಹೃದಯದ ಬಡಿತ ನನ್ನ ಕಿವಿಗಳಲ್ಲೇ ಕೇಳಿಸುತ್ತಿತ್ತು.

ಅತ್ತ ಕಡೆ ಅವನು ಯೋಚಿಸುತ್ತಿದ್ದುದು ನನ್ನ ಗಮನಕ್ಕೆ ಬರುತ್ತಿತ್ತು... “ಮ್... ಸರಿ, ಇವತ್ತೇ ಭೇಟಿಯಾಗೋಣ!”

“ಎಲ್ಲಿ?”

“ಇವತ್ತು ನಾನು ಮನೇಲೇ ಇದ್ದೀನಿ. ಸ್ವಲ್ಪ ಶೀತ ಆಗಿತ್ತು. ಇವತ್ತು ಸಂಜೆ ನಿನ್ನ ಕೆಲಸ ಮುಗಿದ ಮೇಲೆ?”

ಈ ಚಳಿಗಾಲದ ದಿನಗಳಲ್ಲಿ ಬೆಳ್ಳಂಬೆಳಗ್ಗೆ ಬೇಗನೆದ್ದು, ಕಿಲೋಮೀಟರ್ ದೂರದಲ್ಲಿದ್ದ, ಇತ್ತೀಚೆಗೆ ನಾನು ಸೇರಿಕೊಂಡಿದ್ದ ಜಿಮ್‌ನ ತನಕ ಜಾಗಿಂಗ್ ಮಾಡಿ ನನಗೂ ಶೀತವಾಗಿತ್ತು. ಇವತ್ತು ಬೆಳಗ್ಗೆ ಕೆಲಸಕ್ಕೆ ಹೋಗೋದೇ ಬೇಡವೆಂದುಕೊಂಡಿದ್ದರೂ ಕೊನೇಕ್ಷಣದಲ್ಲಿ ಹೊರಟುಬಂದಿದ್ದೆ.

“ಸರಿ, ನಾಲಕ್ಕು ಗಂಟೆಗೆಲ್ಲ ನನ್ನ ಕೆಲಸ ಮುಗಿದುಬಿಡುತ್ತೆ. ಎಲ್ಲಿಗೆ ಬರಲಿ ಹೇಳು?”

“ನಿನಗೆ ನನ್ನ ಅಡ್ರೆಸ್ ಗೊತ್ತು ತಾನೇ?” ಎಂದು ಅವನು ಸುರಳೀತವಾಗಿ ನನ್ನದೇ ವಿಳಾಸವನ್ನು ಹೇಳಿದ. ಇದೆಲ್ಲ ಬಾಲಿಶ ಅನಿಸಿತು. ಆದರೂ ಇತ್ತೀಚೆಗೆ ನನ್ನೆಲ್ಲ ಭಯ-ಅಭದ್ರತೆಗಳನ್ನೆಲ್ಲ ಎದುರಿಸುತ್ತಿರುವ, ಅಚ್ಚರಿಯಾಗುವಂತೆ ಅವುಗಳನ್ನೆಲ್ಲ ಗೆಲ್ಲುತ್ತಿರುವ ನನಗೆ ಇದೂ ಒಂದನ್ನು ಎದುರಿಸಿ ಬಿಡೋಣವೆನಿಸಿತು. ಅವನು ನುಡಿದ,

“ಸರಿ, ಆದರೆ ಇದೇ ನಮ್ಮ ಕೊನೇ ಭೇಟಿಯಾದರೆ ಒಳ್ಳೆಯದು!”

ನಾನು ನಿರ್ಲಿಪ್ತ ಧ್ವನಿಯಲ್ಲೆಂಬಂತೆ ಕೇಳಿದೆ, “ಯಾಕೆ?”

“ಉತ್ತರ ನಿನಗೂ ಗೊತ್ತು. ಹೊರಗಡೆ ಎಲ್ಲರೆದುರು ನಿನ್ನೊಟ್ಟಿಗೇ ನೀನು ಮಾತನಾಡಿಕೊಳ್ಳುತ್ತ ನಿನ್ನ ಮೊಬೈಲ್ ನಂಬರ್ ನೀನೇ ಡಯಲ್ ಮಾಡಿಕೊಳ್ಳುತ್ತ ವಿಚಿತ್ರ ಅನಿಸಿಕೊಳ್ಳಬಾರದು ತಾನೇ? ಅದಲ್ಲದೇ ಇನ್ನೂ ಕಾರಣಗಳಿವೆ...”

ಕೊನೆಗೂ ನಾನು ಮಾತು ಮುಗಿಸಿದಾಗ ಜೊತೆಯಲ್ಲಿ ಕುಳಿತಿದ್ದ ಸಹೋದ್ಯೋಗಿಗಳು “ಊಹ್, ಆಹ್, ಯಾರಪ್ಪಾ ಅದೂ?” ಎಂದೆಲ್ಲ ರಾಗ ತೆಗೆದರು, ಅವರ್ಯಾರಿಗೂ ನಿಜ ಸಂಗತಿ ತಿಳಿಸುವ ಧೈರ್ಯವಾಗಲಿಲ್ಲ ನನಗೆ!

******

ಬಸ್ಸಿಳಿದ ಕೂಡಲೇ ನನ್ನ ನಂಬರ್ ಡಯಲ್ ಮಾಡಿದೆ, ಮೂರು ರಿಂಗಾಗುವುದರೊಳಗೆ ಅವನು ಫೋನ್ ಎತ್ತಿದ,

“ಎಲ್ಲಿದೀಯಾ ನೀನು?”

“ನಾನಾಗ್ಲೇ ಸುಳ್ಳು ಬೊಂಕಿದ್ದೆ, ನಾನಿವತ್ತು ಮನೇಲಿರಲಿಲ್ಲ.”

“ಏನು?!” ಅವನ ಈ ಎಲ್ಲ ತಂತ್ರಗಳೂ ನನಗೀಗ ಅರ್ಥವಾಗತೊಡಗಿದ್ದವು.

“ಹೌದು, ಆದ್ರೆ ಚಿಂತಿಸಬೇಡ, ನಾವಿವತ್ತು ಭೇಟಿಯಾಗೋಣ”. ನನ್ನ ಸುತ್ತ ಮುತ್ತಲ ನಗರದ ಗೌಜು-ಗದ್ದಲ ನನಗೆ ಕೇಳಿಸುತ್ತಿತ್ತು, ಮತ್ತು ಅವೇ ಗೌಜು-ಗದ್ದಲಗಳು ಮೊಬೈಲಿನ ಆಕಡೆಯಿಂದ ಅನುರಣನಗೊಳ್ಳುತ್ತಿತ್ತು.

“ಎಲ್ಲಿ? ಯಾವಾಗ?” ನನಗೆ ಕಿರಿಕಿರಿಯಾಗಿದ್ದನ್ನು ಅವನು ಗ್ರಹಿಸಿದ,

"ಹೇ, ನಿನಗೆ ಹೇಳಿದ್ನಾ? ನಾನಿವತ್ತು ಆಫೀಸಿಗೆ ಹೋಗಿ, ವಾಪಸ್ಸು ಬಂದು, ಬಸ್ಸಿಳಿದು ಈಗ ತಾನೇ ನನ್ನ ರೂಮಿನ ಕಡೆಗೆ ನಡ್ಕೊಂಡು ಹೋಗ್ತಾ ಇದೀನಿ."

ನನ್ನ ರೂಮಿರುವ ಸಣ್ಣಗಲ್ಲಿಯೊಳಕ್ಕೆ ತಿರುಗುತ್ತ ನಾನು ನನ್ನ ಸುತ್ತಮುತ್ತಲೆಲ್ಲ ನೋಡಿದೆ. ದೊಡ್ಡ ಲಾರಿಯೊಂದು ಮೊದಲನೇ ಮಹಡಿಯಲ್ಲಿರೋ ನನ್ನ ರೂಮಿಗೆ ಹೋಗದಂತೆ ನನ್ನ ದಾರಿಗಡ್ಡವಾಗಿ ನಿಂತಿತ್ತು.

"ಹಂಗಾದ್ರೆ, ಈಗೆಲ್ಲಿದೀಯಾ?" ನಾನವನನ್ನ ಕೇಳಿದೆ.

"ನಾನು ನಿನ್ನೆದುರಿನಲ್ಲೇ ಇದೀನಿ, ನೇರವಾಗಿ ನೋಡು ಈಕಡೆ". ನಾನು ನೇರವಾಗಿ ನೋಡಿದೆ–ಅವನನ್ನು ಕಂಡೆ, ನನ್ನನ್ನೂ ಕಂಡುಕೊಂಡೆ!

ನನ್ನ ರೂಮಿರೋ ಎರಡನೇ ಮಹಡಿಯಲ್ಲಿ ಬಾಡಿಗೆಗಿದ್ದವರು ಮನೆ ಬದಲಾಯಿಸುತ್ತಿದ್ದರೂಂತ ಕಾಣಿಸುತ್ತೆ, ಸಾಮಾನನ್ನೆಲ್ಲ ಅದೇ ಲಾರಿಗೆ ತುಂಬುತಿದ್ದರು. ಆ ಸಾಮಾನುಗಳಲ್ಲಿ ದೊಡ್ಡದೊಂದು ಕಬ್ಬಿಣದ ಅಲಮಾರಿಯೊಂದು ಲಾರಿಯೊಳಕ್ಕೆ ಎತ್ತಿರಿಸಿಕೊಳ್ಳಲು ಕಾಯುತ್ತಿತ್ತು. ಆ ಅಲಮಾರಿಯ ಬಾಗಿಲಿನಲ್ಲಿದ್ದ ಉದ್ದುದ್ದದ ಕನ್ನಡಿಯೊಳಗೆ ನಾನವನನ್ನು ಕಂಡೆ...

ಅವನನ್ನು ಕಂಡೆ, ನನ್ನನ್ನೂ ಕಂಡುಕೊಂಡೆ! ಅವನು ಆ ಅಲಮಾರಿಯ ಕನ್ನಡಿಯೊಳಗಿಂದ ನನ್ನೆಡೆಗೆ ನೋಡುತ್ತ ನಗುತ್ತಿದ್ದ. ನಾನು ಮೊಬೈಲಿನೊಳಕ್ಕೆ "ಹಾಯ್" ಅಂದೆ, ಅವನೂ "ಹಾಯ್" ಅಂದ.

ಅಷ್ಟರಲ್ಲಿ ಎರಡನೇ ಮಹಡಿಯ ಹುಡುಗನೊಬ್ಬ ಬಂದು ಮೆಟ್ಟಿಲನೆಲ್ಲ ಆವರಿಸಿಕೊಂಡಿದ್ದಕ್ಕೆ ಕ್ಷಮೆ ಕೇಳಿ, "ಐದೇ ನಿಮಿಷ ಸಾರ್, ಎಲ್ಲಾ ಲೋಡ್ ಆಗೋಯ್ತು" ಅಂತ್ಹೇಳಿ ನನಗೆ ಅಲ್ಲೇ ಕುಳಿತು ಕಾಯಲಿಕ್ಕೆಂದು ಚೇರ್ ಒಂದನ್ನು ಹಾಕಿಕೊಟ್ಟ. ನಾನವನೆಡೆ ಪರವಾಗಿಲ್ಲವೆಂಬಂತೆ ನಕ್ಕು ನಿಂತೇ ಇವನೊಡನೆ ಮಾತು ಮುಂದುವರಿಸಿದೆ.

"ಸೋ, ಹಿಯರ್ ಯು ಆರ್!"

"ಹೌದು, ಪ್ರಾಮಿಸ್ ಮಾಡಿದ್ದಂತೆಯೇ"

"'ನೀನು ನನ್ನ ಥರಾನೇ ಕಾಣ್ತೀಯ"

"ಹೌದು, ಯಾಕೇಂತ ನಿನಗೆ ಗೊತ್ತು, ನಾನು ನೀನೇ!"

ತಟ್ಟನೆ ನನಗೆ ಅವನು 'ಇದೇ ನಮ್ಮ ಕಡೆಯ ಭೇಟಿಯಾದರೆ ಒಳಿತು' ಅಂತಾ ಯಾಕೆ ಹೇಳಿದ್ದ ಎಂಬುದು ಹೊಳೆಯಿತು. ಅವನು ನನ್ನ ಯೋಚನೆಯನ್ನು ಗ್ರಹಿಸಿದಂತೆ ನುಡಿದ,

"ಹೌದು, ಅದೇ ಕಾರಣಕ್ಕೇ ನಾನು ಹೇಳಿದ್ದು. ನೀನು ಈ ತರ ಪಬ್ಲಿಕ್ಕಲ್ಲಿ ಯಾವಾಗ್ಲೂ ನಿನ್ನೊಳಗಿನವನೊಂದಿಗೆ ಮಾತನಾಡೋ ಹಾಗಿಲ್ಲ. ನೀನು ತಂತಾನೇ ಮಾತನಾಡಿಕೊಳ್ತಾ ಇದ್ರೆ ನೋಡಿದವರು ನೋಡಿದವರು ಹುಚ್ಚ ಅಂದುಬಿಡ್ತಾರೆ ಅಷ್ಟೆ!"

"ಸರಿ, ಆದ್ರೆ ನೀನು ನನ್ನನ್ನೇ ಯಾಕೆ ಆರಿಸಿಕೊಂಡೆ?"

"ನಿನ್ನನ್ನು ಆರಿಸಿಕೊಳ್ಳೋದು ಅಂದ್ರೆ ಏನರ್ಥ, ಈ ಪ್ರಯೋಗಕ್ಕಾ? ಇದು ಪ್ರಯೋಗ ಅಲ್ಲ, ನನ್ನ ಬಾಹ್ಯರೂಪಿಯನ್ನು ಸುಧಾರಿಸುವ ಯತ್ನ ಅಷ್ಟೆ. ನಾನ್ಯಾವತ್ತೂ ಎಲ್ಲರಂತೆ ಆತ್ಮವಿಶ್ವಾಸವುಳ್ಳವನೂ, ಶಕ್ತನೂ ಆಗಿದ್ದೆ. ಆದರೆ ನನ್ನ ಬಾಹ್ಯರೂಪಿಯಾಗಿ ನಿನ್ನಲ್ಲಿ ಆ ಆತ್ಮ ವಿಶ್ವಾಸವಿರಲಿಲ್ಲ. ಮತ್ತು ನೀನು ಸಹಾಯಕ್ಕೋಸ್ಕರ ನಿನ್ನೊಳಕ್ಕೇ ತೆರೆದುಕೊಂಡು ನಿನ್ನ ಅಂತಃರೂಪಿಯಾದ ನನ್ನ ಸಹಾಯ ಕೇಳಲಿಲ್ಲ. ಸೋ, ನಾನು ಮಾಡಿಕೊಂಡಿದ್ದು ಒಂಥರಾ ಸ್ವಸಹಾಯ, ಸ್ವಯಂಸೇವೆ, ಸ್ವಯಂ ಚಿಕಿತ್ಸೆ ಎಲ್ಲವೂ. ನಾನು ನನ್ನನ್ನೇ ಸರಿಪಡಿಸಿಕೊಳ್ತಿದ್ದೆ. ನಾನು ನಮ್ಮಿಬ್ಬರನ್ನೂ ಸ್ವಯಂ ವಿಶ್ವಾಸವುಳ್ಳ, ಖುಷಿಯಾಗಿರುವವನೂ ಶಕ್ತನೂ, ಆಗಿರುವ ಒಬ್ಬ ವ್ಯಕ್ತಿಯನ್ನಾಗಿ ಮಾಡಬೇಕೆಂದು ಪ್ರಯತ್ನ ಪಟ್ಟೆ..."

ನಾನು ಚೇರ್ ಮೇಲೆ ಕುಳಿತು ಅವನೊಂದಿಗೆ ಮೊಬೈಲಿನಲ್ಲಿ ಮಾತಲಾಡಲಾರಂಭಿಸಿದೆ. ತುಂಬಾ ವಿಷಯಗಳ ಬಗ್ಗೆ ಬಹಳ ವಿವರವಾಗಿ ನಾವಿಬ್ಬರೂ ಮಾತನಾಡಿದೆವು. ಅವನು ನನ್ನ ಪ್ರತಿಯೊಂದು ಸಮಸ್ಯೆಗೂ ಉತ್ತರಕೊಡುತ್ತಿದ್ದುದನ್ನೂ, ಪ್ರತಿಯೊಂದು ಅನುಮಾನಕ್ಕೂ ಪರಿಹಾರ ಕೊಡುತ್ತಿದ್ದುದನ್ನೂ ಕಂಡು ನನಗೆ ಅಚ್ಚರಿಯೂ ಸಂತೋಷವೂ ಒತ್ತಟ್ಟಿಗೆ ಆಗುತ್ತಿತ್ತು... ನಂತರ ಮಾತನಾಡಲು ಇನ್ನೇನು ಉಳಿದಿದೆಯೆಂದು ಯೋಚಿಸುವಷ್ಟರಲ್ಲಿ ಅವನು ತಮಾಷೆ ಮಾಡುವವನಂತೆ ನುಡಿದ,

"ನನಗ್ಗೊತ್ತು, ನೀನಿವಾಗ ಹೊಸಾ ಸಮಸ್ಯೆಯಲ್ಲಿ ಸಿಕ್ಕಿಬಿದ್ದಿದೀಯ."

"ನಿನಗೆ ಹೇಗೆ ಗೊತ್ತಾಯ್ತು?"

“ಹ್ಞ.. ನಾನವತ್ತೇ ಹೇಳಿದ್ದೆ, ನೀನು ನನ್ನ... ಅಲ್ಲಲ್ಲ, ನಾನು ನಿನ್ನ **doppelganger!**”

“ಹೌದೇನು?” ಇಬ್ಬರೂ ನಗುತ್ತಿದ್ದೆವು. ಕನ್ನಡಿಯೊಳಗೆ ನಾನು ಯಾವತ್ತಿಗಿಂತ ಆರೋಗ್ಯವಾಗಿ, ದಷ್ಟಪುಷ್ಟವಾಗಿ ಕಾಣುತ್ತಿದ್ದೆ. ಇವತ್ತು ಸಂಜೆ ‘ಕೂಲ್‌ಜಾಯಿಂಟ್’ ಹತ್ರ ವಾಕಿಂಗ್ ಹೋದಾಗ ನನ್ನ ತೂಕ ನೋಡಿಕೊಳ್ಳಬೇಕು, ಇತ್ತೀಚೆಗೆ ನಾನು ರಣಹದ್ದಿನ ತರಾ ತಿನ್ನೋಕೆ ಶುರುಮಾಡಿದ್ದೇನೆ.

ನನ್ನ ಯೋಚನೆಗಳಿಗೆ ಕತ್ತರಿ ಹಾಕುತ್ತ ಅವನು ಕೇಳಿದ, “ಸೋ, ಈ ಸಮಸ್ಯೆಗೂ ನಿನಗೆ ಪರಿಹಾರ ಬೇಕು ಅಲ್ವೇ?” ನನ್ನ ಹೃದಯ ನನ್ನ ಬಾಯಿಗೇ ಬಂದಂತಾಯ್ತು, ಎದೆಯೊಳಗೆ ಉಸಿರು ಕಟ್ಟಿದಂತಾಗಿ ಧೀರ್ಘವಾಗಿ ಉಸಿರೆಳೆದುಕೊಂಡು ನುಡಿದೆ,

“ಅಲ್ಲ, ನಿಜ ಹೇಳಬೇಕಂದ್ರೆ, ಇದು ಸಮಸ್ಯೆಯಲ್ಲ. ಒಂದು ಹೊಸಾ ತರಹದ ಪರಿಸ್ಥಿತಿ, ಹೊಸಾ ಅನುಭೂತಿ...” ಅವನು ನಕ್ಕು ನುಡಿದ, “ನನಗೆ ಗೊತ್ತು, ಯಾಕೇಂದ್ರೆ ಇಲ್ಲೂ ಅದೇ ಅನುಭೂತಿಯಿದೆ!”

“ಹೌದಾ?! ಹಾಗಾದ್ರೆ ಅವಳಿಗೆ ಹೇಳಿದ್ಯಾ?”

ನನ್ನ ಅವಸರಕ್ಕೆ ಅವನು ನಿಟ್ಟುಸಿರು ಬಿಟ್ಟ, “**Oh, no way!** ಈ ಹೃದಯದ ವಿಷಯಗಳಲ್ಲಿ ನಾನೂ ನಿನ್ನಂತೆಯೇ ಪರಮ ಪೆದ್ದ. ಅನನುಭವಿ. ಅದಲ್ದೇ ಇದು ನನ್ನ ಮೊದಲನೇ ಸಲ ಬೇರೆ, ನಿಂಗೊತ್ತು ತಾನೇ?”

“ನನಗ್ಹೇಗೆ ಗೊತ್ತಾಗಬೇಕು, ನನಗೆ ನೀನ್ಯಾವಾಗಲೂ ನನ್ನ **happier & confident half**”

ಅವನು ತುಂಬಾನೇ ನಕ್ಕ. “ಹಾಗಾದ್ರೆ, ನಾವಿಬ್ಬರೂ ಈ ವಿಷಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳೋಣ”

“ಏ, ಬೇಡಪ್ಪ! ಇಲ್ಲಿ ಲೆಕ್ಕಾಚಾರದ ಯಾವುದೂ ನಡೆ ಬೇಡ, ನನ್ನ ಹೃದಯವೇ ದಾರಿಹುಡುಕಿಕೊಳಲಿ.”

“**Exactly right,**” ಅವನು ಒಪ್ಪಿಕೊಂಡ, “ನೀನೇ ಏನಾದ್ರೂ ನನಗೆ ಸಹಾಯ ಮಾಡ್ತೀನಿ ಅಂದಿದ್ದರೂ ನಾನಿದನ್ನೇ ಹೇಳ್ತಿದ್ದೆ.” ಬಹಳ ವರ್ಷಗಳ ನಂತರ ಮೊಟ್ಟ ಮೊದಲ ಬಾರಿಗೆ ನನಗೆ ನನ್ನ ಮೇಲೇ ಹೆಮ್ಮೆಮೂಡಿತು...

ನನ್ನ ರೂಮಿಗೆ ಹೋಗುವ ದಾರಿ ತೆರವಾಯಿತು. ನಾನು ಕುಳಿತಿದ್ದ ಕುರ್ಚಿಯನ್ನು ಬಿಟ್ಟು ಎದ್ದೆ. ನನಗೆ ಆಗ ಆ ಕುರ್ಚಿಕೊಟ್ಟವನು ಕಾದುದ್ದಕ್ಕಾಗಿ ಥ್ಯಾಂಕ್ಸ್ ಹೇಳಿದ, ನಾನು ಮೊಬೈಲಿನೊಳಕ್ಕೆ ಮಾತನಾಡುತ್ತಲೇ ಅವರೆಡೆಗೆ ನಗು ಬೀರಿದೆ.

“ಸರೀ ಹಾಗಾದ್ರೆ, ನೀನು ಆವಾಗ ಹೇಳಿದಂತೇ ‘ಬೈ!’ ”

“**Adieu!**”

ಅವನೇ ಮೊದಲು ಕರೆಯನ್ನು ಕಟ್ ಮಾಡಿದ, ಲಾರಿ ಚಲಿಸಲಾರಂಭಿಸಿತು, ಅಲ್ಮೆರಾವನ್ನು ಲಾರಿಯೊಳಕ್ಕೆ ಎತ್ತಿಟ್ಟು ಅದರ ಕನ್ನಡಿಯ ಮೇಲೆ ಯಾವುದೋ ಹಳೇ ಬೆಡ್‌ಶೀಟನ್ನು ಮುಚ್ಚಿದ್ದರು. ನಾನು ನನ್ನ ರೂಮಿನ ಮೆಟ್ಟಿಲುಗಳನ್ನು ಏರುತ್ತ ನನ್ನ ನಂಬರ್ ಡಯಲ್ ಮಾಡಲು ಯತ್ನಿಸಿದೆ, ಆತ್ತಕಡೆಯಿಂದ ಉತ್ತರ ಬಂತು! – “**This line is busy, kindly try after sometime!**”

## ಹ್ಯಾವ್ ಎ ನೈಸ್ ಡೇ

ಶಿವಕುಮಾರ ಕೆ. ಎಸ್. **shivu_ks@rediffmail.com**